ವರ್ಷಗಳಿಂದ ಪ್ರಾರಂಭವಾಗಿರತಕ್ಕಂಥ ಯೋಜನೆ. ಈ ಬಲದಂಡೆ ಕಾಲುವೆಗೆ ಎಷ್ಟು ಹಣವನ್ನು ಒದಗಿಸಿ ಎಷ್ಟು ವರ್ಷದಲ್ಲಿ ಇದನ್ನು ಮುಗಿಸುವುದಕ್ಕೆ ತಾವು ಕ್ರಮ ಕೈಗೊಂಡಿದ್ದೀರಿ ಎಂಬ ಬಗ್ಗೆ ದಯವಿಟ್ಟು ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ಹಣವನ್ನು ತ್ವರಿತಗತಿಯಿಂದ ಕೊಡುತ್ತಿದ್ದೇವೆ. ಈ 2000 ಇಸವಿಯೊಳಗೆ ಮುಗಿಸಲಿಕ್ಕೆ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ. ಅದರ ಜೊತೆಜೊತೆಗೆ ಕಳೆದ ಒಂದು ವರ್ಷದಲ್ಲಿ ಈ ನಿಟ್ಟಿನಲ್ಲಿ ಎಷ್ಟು ಪ್ರಗತಿಯನ್ನು ಸಾಧಿಸಲಾಗಿದೆ ಎಂಬ ವಿಷಯ ತಮಗೆ ಗೊತ್ತಿರುವುದರಿಂದ ನಾವು ಇದರೊಳಗೆ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇದನ್ನು ಖಂಡಿತವಾಗಿಯೂ ಕೂಡ 2000 ಇಸವಿಯೊಳಗಾಗಿ ಬಚಾವತ್ ಆಯೋಗದ ಪ್ರಕಾರ ನೀರನ್ನು ನಿಲ್ಲಿಸಬೇಕಾಗಿರುವುದು ಏನಿದೆ ಅದನ್ನು ನಾವು ಖಂಡಿತವಾಗಿಯೂ ಮಾಡುತ್ತೇವೆ. ಅದರ ಜೊತೆಜೊತೆಗೆ ಈ ಕಾಲುವೆ ಕೆಲಸವನ್ನು ಕೂಡ ಮಾಡುತ್ತೇವೆ. ಈಗಾಗಲೇ ತಮಗೆ ಗೊತ್ತಿರುವಂತೆ ಭೂ ಸ್ವಾಧೀನ ಕ್ರಮಗಳು ಬಹಳ ವಿಳಂಬವಾಗಲು ಕಾರಣವಾಗಿದ್ದವು. ಈಗ ಅಲ್ಲಿರತಕ್ಕಂಥ ಜಾಂದಾರ್ ಎನ್ನುವ ಒಬ್ಬ ಅಧಿಕಾರಿಗೆ ಕರ್ನಾಟಕ ರಾಜ್ಯದ ಮುಖ್ಯ ಕಾರ್ಯದರ್ಶಿಗೆ ಇರತಕ್ಕಂಥ ಅಧಿಕಾರವನ್ನೇ ಅವರಿಗೆ ಕೊಟ್ಟು ಅಲ್ಲಿ ನೇಮಕಾತಿ ಮಾಡಲಾಗಿದೆ. ಅವರ ಕೈಕೆಳಗೆ ಇರಬೇಕಾಗಿರುವ ಸಿಬ್ಬಂದಿ ವರ್ಗದವರನ್ನೂ ಕೂಡ ಅವರಿಗೆ ಕೊಟ್ಟಿರುವುದರಿಂದ ಇವೊತ್ತು ಭೂ ಸ್ವಾಧೀನ ಕ್ರಮಗಳು ಕೂಡ ಬಹಳ ತ್ವರಿತ ಗತಿಯಲ್ಲಿ ನಡೆಯುತ್ತಿದೆ. ಅದರ ಬಗ್ಗೆ ನನಗೆ ಭರವಸೆ ಇದೆ.

ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿ : ಅಧ್ಯಕ್ಷರೇ, ಘಟಪ್ರಭ ಕಾಲುವೆಯು ನನ್ನ ಮತಕ್ಷೇತ್ರದಲ್ಲಿಯೂ ಹಾದು ಹೋಗುತ್ತದೆ. ಬಜೆಟ್ಟಿನಲ್ಲಿ ಹಣವಿಲ್ಲದೇ ಅಲ್ಲಿ ಒಬ್ಬ ಅಧಿಕಾರಿಯನ್ನು ನೇಮಕ ಮಾಡುವುದರಿಂದ ಕೆಲಸ ಸಾಧ್ಯವಾಗುವುದಿಲ್ಲ. ಬಜೆಟ್ ಈ ಪ್ರಸ್ತಾವನೆಗೆ ಹೆಚ್ಚಿನ ದುಡ್ಡಿಲ್ಲ. ಹೋದ ವರ್ಷ ಎಷ್ಟಿತ್ತು ಅದಕ್ಕಿಂತ ಹೆಚ್ಚಿಗೆಯೂ ಇಲ್ಲ. ಹೆಚ್ಚಿನ ಪ್ರಮಾಣದಲ್ಲಿ ದುಡ್ಡನ್ನು ಒದಗಿಸಿ ಆ ಕೆಲಸವನ್ನು ಬೇಗ ಮುಗಿಸುತ್ತಾರೆಯೇ ಎಂಬುದನ್ನು ತಮ್ಮ ಮುಖಾಂತರ ಕೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಈಗಾಗಲೇ ಗೊತ್ತಿರುವಂತೆ ನಾವು ಕೃಷ್ಣಾ ಜಲ ಭಾಗ್ಯ ನಿಗಮದ ಮೂಲಕ 186 ಕೋಟಿ ರೂ.ಗಳ ಸಂಪನ್ಮೂಲಗಳನ್ನು ಕ್ರೋಢೀಕರಿಸಿದ್ದೇವೆ. ಎರಡನೇ ಹಂತದಲ್ಲಿಯೂ ಕೂಡ ಕೃಷ್ಣಾ ಜಲ ಭಾಗ್ಯ ನಿಗಮದ ಮುಖಾಂತರ ಸುಮಾರು 400 ಕೋಟಿ ರೂ.ಗಳನ್ನು ಕ್ರೋಢೀಕರಿಸಲು ಕ್ರಮ ಕೈಗೊಂಡಿದ್ದೇವೆ. ಈ ವರ್ಷದ ಅನುದಾನದಲ್ಲಿಯೂ ಕೂಡ ಸನ್ಮಾನ್ಯ ಹಣಕಾಸು ಸಚಿವರು ಬಜೆಟನಲ್ಲಿ 250 ಕೋಟಿ ರೂ.ಗಳನ್ನು ಒದಗಿಸಿದ್ದಾರೆ. ಅದ್ದರಿಂದ ಆ ಕೆಲಸ ಕಾರ್ಯಗಳನ್ನು ತೀವ್ರಗತಿಯಿಂದ ಕೈಗೊಳ್ಳುತ್ತೇವೆ.

ಬೆಂಗಳೂರು ನಗರದಲ್ಲಿ ಸೊಳ್ಳೆಗಳ ಹಾವಳಿ

138 - ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ಪಕ್ಷ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಬೇಸಿಗ ಆರಂಭವಾಗುವ ಮುನ್ನವೇ ಸೊಳ್ಳೆಗಳ ಹಾವಳಿ ಪ್ರಾರಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಅದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ಅಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಹೌದು.

ಆ) ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸ್ಥಳದಲ್ಲಿ ಸೊಳ್ಳೆ ನಿಯಂತ್ರಣವನ್ನು ಎಂ.ಸಿ. ಗ್ಯಾಂಗ್ ಮುಖಾಂತರ ನೀರು ನಿಂತಿರುವ ಸ್ಥಳಗಳಲ್ಲಿ ಸೊಳ್ಳೆ ಉತ್ಪತ್ತಿಯಾಗುವಂತ ಸ್ಥಳಗಳಲ್ಲಿ ನಿರ್ದಿಷ್ಟ ಕಾರ್ಯಕ್ರಮ ಹಾಕಿಕೊಂಡು ವಾರಕ್ಕೊಮ್ಮೆ ಕೀಟ ನಾಶಕಗಳನ್ನು ಸಿಂಪಡಿಸಲಾಗುತ್ತಿದೆ. ಈ ವ್ಯಾಪ್ತಿಯಲ್ಲಿ 25 ಸಬ್ ಯೂನಿಟಗಳು ಕೆಲಸ ನಿರ್ವಹಿಸುತ್ತಿವೆ.

ಎ.ಎಲ್. ಓಗ್ಯಾಂಗಗಳ ಮುಖಾಂತರ ದೊಡ್ಡ ಚರಂದಿಗಳಲ್ಲಿ ನೀರು ನಿಲ್ಲುದಂತೆ ವಲಯವಾರು ನಿರ್ದಿಷ್ಟ ಕಾರ್ಯಕ್ರಮದಂತೆ ಕೆಲಸ ನಿರ್ವಹಿಸಲಾಗುತ್ತಿದೆ. ಕೀಟ ಸಂಗ್ರಹಕಾರರು ಸಹ ಸೊಳ್ಳೆ ಉತ್ಪಾದನಾ ಸ್ಥಳಗಳನ್ನು ಗುರ್ತಿಸಿ ಕೀಟ ನಾಶಕ ಸಿಂಪಡಣೆಗಾಗಿ ಕ್ರಮ ತೆಗೆದುಕೊಳ್ಳುತ್ತಿರುತ್ತಾರೆ. ನಗರದಲ್ಲಿ ಕೆಡೆಗಳಲ್ಲಿ ಬೆಳೆದಿರುವ ಜೊಂಡು ಇತರೆ ಸಸ್ಯಗಳನ್ನು ಕಾಲಕಾಲಕ್ಕೆ ತೆಗೆಯಲಾಗುತ್ತಿದೆ.

ಶ್ರೀ ಎಸ್. ಸುರೇಶ್ ಕುಮಾರ್ (ಶ್ರೀಮತಿ ಪ್ರಮೀಳಾ ನೇಸರ್ಗಿಯವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಸೊಳ್ಳೆಗಳ ಹಾವಳಿ ಪ್ರಾರಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಹಾಗೂ ಸೊಳ್ಳೆ ನಿಯಂತ್ರಣಕ್ಕೆ ಎಂ.ಸಿ. ಗ್ಯಾಂಗ್ ಮುಖಾಂತರ ನೀರು ನಿಂತಿರುವ ಸ್ಥಳದಲ್ಲಿ ಸೊಳ್ಳೆ ಉತ್ಪತ್ತಿಯಾಗುವಂತಹ ಸ್ಥಳಗಳಲ್ಲಿ ನಿರ್ದಿಷ್ಟ ಕಾರ್ಯಕ್ರಮ ಹಾಕಿಕೊಂಡು ವಾರಕ್ಕೊಮ್ಮೆ ಕೀಟನಾಶಕಗಳನ್ನು ಸಿಂಪಡಿಸಲಾಗುವುದು ಹಾಗೂ ಈ ವ್ಯಾಪ್ತಿಯಲ್ಲಿ 25 ಸಬ್ ಯೂನಿಟಗಳು ಕೆಲಸ ನಿರ್ವಹಿಸುತ್ತಿವೆಯೆಂದು ತಿಳಿಸಿದ್ದಾರೆ. ಆದರೆ ಇಡೀ ಬೆಂಗಳೂರಿನಲ್ಲಿ ಒಂದು ಪ್ರೋಗ್ರಾಂ ಆಫ್ ವರ್ಕ ತರಹ ಹಾಕಿಕೊಂಡು ಎಲ್ಲೆಲ್ಲಿ ನೀರು ನಿಂತಿದೆ, ಎಲ್ಲಿ ಜೌಗು ಪ್ರದೇಶವಿದೆ ಅದನ್ನು ನಿವಾರಣೆ ಮಾಡುವುದಕ್ಕೆ ಏನಾದರೂ ಪ್ರಿಯಾರಿಟಿ ಆಫ್ ವರ್ಕ ಪ್ರಕಾರ ಮಾಡುತ್ತಿದ್ದಾರೋ? ಇನ್ನು ಎರಡನೆಯದು ಸೊಳ್ಳೆ ನಿವಾರಣೆ ಏನು ಔಷಧ ಉಪಯೋಗಿಸುತ್ತಿದ್ದೀರಿ?

ಶ್ರೀ ಆರ್. ರೋಷನ್ ಬೇಗ : ಮಾನ್ಯ ಅಧ್ಯಕ್ಷರೇ, ಪ್ರೋಗ್ರಾಂ ಆಫ್ ವರ್ಕ್ಸ್ ನಾವು ಹಾಕಿಕೊಂಡಿದ್ದೇವೆ. ಸೊಳ್ಳೆ ನಿಯಂತ್ರಿಸುವುದಕ್ಕೆ ಗ್ಯಾಂಗ್ ಮ್ಯಾನಗಳು ಹೋಗಿ ಔಷಧ ಸ್ಪ್ರೇ ಮಾಡಿಕೊಂಡು ಬರುತ್ತಾರೆ. ಲಾರವಿಸೈಡ್ಸ್ ಎನ್ನುವ ಒಂದು ಮೆಡಿಸಿನ್ ಇದೆ, ಆ ಮೆಡಿಸಿನ್ ಸ್ಪ್ರೇ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ಸೊಳ್ಳೆಗಳದ್ದೇ ದೊಡ್ಡ ಸಮಸ್ಯೆಯಾಗಿದೆ. ಅವುಗಳ ನಿಯಂತ್ರಣಕ್ಕೆ ಏನೋ ಗ್ಯಾಂಗಮೆನಗಳು ಹೋಗುತ್ತಾರೆ ಯಾವುದೋ ಒಂದು ಮೆಡಿಸಿನ್ ಸ್ಪ್ರೇ ಮಾಡುತ್ತಾರೆ. ಆದರೆ ಇಲ್ಲಿ ಆಗಿರುವುದು ಏನೆಂದರೆ ಅಲಸೂರು ಟ್ಯಾಂಕ್ ಯಲಂದೂರು ಟ್ಯಾಂಕ್ ಇವುಗಳಿಗೆ ಬೆಂಗಳೂರಿನ ಚರಂದಿ ನೀರೆಲ್ಲಾ ಹೋಗುತ್ತದೆ. ಆದ್ದರಿಂದ ಆ ಟ್ಯಾಂಕಗಳು ಸೊಳ್ಳೆಗಳ ಬ್ರೀಡಿಂಗ್ ಸೆಂಟರ್ ಆಗಿದೆ.

ಏರಪೋರ್ಟ್ ಹತ್ತಿರ ಟ್ರೀಟಮೆಂಟ್ ಪ್ಲಾಂಟ್ ಇದೆ, ಅದು ಇದ್ದರೂ ಸಹ whenever there is powercut, through a by-pass sewage water enters the tank and the entire tank is polluted and it has become a breeding centre. ಸರ್ಕಾರದವರು ಅಂಡರ್‌ಗ್ರೌಂಡ್ ಡ್ರೈನೇಜ್, ಹಾಗೂ ಚರಂಡಿ ನೀರನ್ನು ಎಫೆಕ್ಟೀವ್ ಆಗಿ ಕಂಟ್ರೋಲ್ ಮಾಡಬೇಕು ಎಂದು ಹೇಳಿ ಅಲಸೂರು ಟ್ಯಾಂಕ್ ಹಾಗೂ ಯಳಂದೂರು ಟ್ಯಾಂಕನ್ನು ನಿರ್ವಹಣೆಗೋಸ್ಕರ ಪ್ರೈವೇಟನವರಿಗೆ ಏಕೆ ಕೊಡಬಾರದು ಹಾಗೂ ಅಲ್ಲಿಗೆ ಚರಂಡಿ ನೀರು ಹೋಗದ ಹಾಗೆ ಮಾಡಬೇಕು ಎಂದು ಯೋಚನೆ ಮಾಡಿಕೊಂಡಿದ್ದೇವೆ. ಹೀಗೆ ಮಾಡಿದರೆ, only then there will be some solution to the problem. Unless solution is found to this problem the mosquito menace will be there.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ಕೆಂಪಾಂಬುಧಿ ಕಡೆಗೆ ಬೆಂಗಳೂರಿನ ಚರಂಡಿ ನೀರನ್ನು ಬರುತ್ತಿದ್ದಾರೆ. ನಾನು ಮಾನ್ಯ ಮಂತ್ರಿಗಳಿಗೆ ಕೇಳುವುದೇನೆಂದರೆ ಆ ಕಡೆಗೆ ಈ ರೀತಿ ಚರಂಡಿ ನೀರನ್ನು ಬಿಡುವುದರಿಂದ ಇಡೀ ಟ್ಯಾಂಕ್ ಸೊಳ್ಳೆಗಳ ಬ್ರೀಡಿಂಗ್ ಸೆಂಟರ್ ಆಗಿದೆ. ಇದರಿಂದ ಸೊಳ್ಳೆಗಳ ಕಾಟ ಹೆಚ್ಚಾಗಿದೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ? ಒಂದು ವರ್ಷದಿಂದ ಸತತವಾಗಿ ನಾವು ಈ ಬ್ರೀಡಿಂಗ್ ಸೆಂಟರ್ ಅನ್ನು ತಪ್ಪಿಸಿ, ಚರಂಡಿ ನೀರು ಕಡೆಗೆ ಬಿಡುವುದನ್ನು ನಿಲ್ಲಿಸಿ, ಎಂದು ಹೇಳುತ್ತಿದ್ದೇವೆ. ಈ ರೀತಿ ಚರಂಡಿ ನೀರನ್ನು ಕೆರೆಗೆ ಬಿಡುವುದನ್ನು ನಾನು ಯಾವ ದೇಶದಲ್ಲೂ ಇದುವರೆಗೂ ಕೇಳಿಲ್ಲ. ತಾವು ಏನಾದರೂ ಕೇಳಿದ್ದೀರಾ? ಇಡೀ ಬೆಂಗಳೂರಿನಲ್ಲಿ ನಾಗರೀಕರಿಗೆ ಇವತ್ತಿನ ದಿವಸ ಈ ಸೊಳ್ಳೆ ಹಾವಳಿ ಇದರಿಂದಲೇ ಜಾಸ್ತಿಯಾಗಿದೆ. ಚಾಮರಾಜಪೇಟೆ, ಬಸವನಗುಡಿ ಹತ್ತಿರ ಸೊಳ್ಳೆಗಳ ಬ್ರೀಡಿಂಗ್ ಸೆಂಟರ್ ಆಗಿದೆ. ತಮಗೆ ಗೊತ್ತಿದೆ ಸೊಳ್ಳೆಗಳನ್ನು ಇರಾಡಿಕೇಷನ್ ಮಾಡುವುದಕ್ಕೆ ಬೇಕಾದಷ್ಟು ಸ್ಕೀಮ್ಸ ಅನ್ನು ಸರ್ಕಾರದವರು ಕೊಟ್ಟಿದ್ದಾರೆ. ಆದರೆ ತಾವು ಏನೂ ಕಾರ್ಯಕ್ರಮ ಹಾಕಿಕೊಂಡಿಲ್ಲ. ತಾವು ಇವತ್ತೇನು ಡಿ.ಡಿ.ಟಿ ಯನ್ನು ಹಂಚುತ್ತಿದ್ದೀರಿ ಅದು ಎಗ್ರವೇಟ್ ಮಾಡುತ್ತಿದೆ. ಸೊಳ್ಳೆಗಳು ಅದರಿಂದ ಇಮ್ಯೂನ್ ಆಗಿ ಅವುಗಳು ಸಾಯುವ ಪರಿಸ್ಥಿತಿಯಲ್ಲಿ ಇಲ್ಲ. ಅದೇ ಆಹಾರವಾಗಿದೆ ಸೊಳ್ಳೆಗಳಿಗೆ. ತಾವು ಇದರ ಬಗ್ಗೆನು ಯೋಚನೆ ಮಾಡುತ್ತಿದ್ದೀರಿ? ಡಿ.ಡಿ.ಟಿ ಬದಲಿಗೆ ಏನಾದರೂ ಪರ್ಯಾಯವಾಗಿ ಉಪಯೋಗಿಸುವುದಕ್ಕೆ ತಾವೇನಾದರೂ ವ್ಯವಸ್ಥೆ ಮಾಡುತ್ತಿದ್ದೀರಾ? ಕೆಂಪಾಂಬುದಿ ಕೆರೆಯಲ್ಲಿ ಚರಂಡಿ ನೀರು ಹೋಗುವುದನ್ನು ತಡೆಹಿಡಿಯುವುದಕ್ಕೆ ಏನು ಕ್ರಮ ತಗೆದುಕೊಂಡಿದ್ದೀರಿ. ಇದರ ಬಗ್ಗೆ ಮುಖ್ಯವಾಗಿ ಯೋಚನೆ ಮಾಡಬೇಕಾಗುತ್ತದೆ. ಇವತ್ತು ಇಂದಿರಾ ನಗರದಲ್ಲಿ ಒಂದು ಕಟಕಿಯನ್ನು ರೂಮಿನಲ್ಲಿ ತಗೆಯುವುದಕ್ಕೆ ಆಗುವುದಿಲ್ಲ. ಆಫೀಸನಲ್ಲಿ ಕುಳಿತು ಕೆಲಸ ಮಾಡುವುದಕ್ಕಾಗುವುದಿಲ್ಲ. ಯಾರು ಬಂದು ಕುಳಿತುಕೊಂಡರು, ಈ ಸೊಳ್ಳೆಗಳ ಕಾಟ ನೋಡಿ ಎದ್ದು ಹೋಗುವ ಪರಿಸ್ಥಿತಿ ಬಂದಿದೆ. ಏರಪೋರ್ಟ್‌ನಲ್ಲಿ ಏನು ಪರಿಸ್ಥಿತಿ ಇದೆ ಎನ್ನುವುದು ತಮಗೆ ಗೊತ್ತಿದೆ. ಅದಕ್ಕೋಸ್ಕರ ತಾವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು ಹೇಳಬೇಕು.

ಅಧ್ಯಕ್ಷರು : ಒಳ್ಳೆಯದಾಯಿತು ಬಿಡಿ, ಬಂದವರು ಹೆಚ್ಚು ಕೂಡುವುದಿಲ್ಲ.

ಶ್ರೀ ಜಿ.ಜಿ. ಶಿವಪ್ಪ : ಮಾನ್ಯ ಅಧ್ಯಕ್ಷರೇ, ಈ ಸೊಳ್ಳೆಗಳ ಕಾಟದಿಂದ ಕ್ಷೌಟ್ಟ ಬರುವುದು ಕಡಿಮೆಯಾಗಿರಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮದ್ರಾಸನಲ್ಲಿ ಹಾಗೂ ಬೇರೆ ಕಡೆಯೂ ಇರಾಡಿಕೇಷನ್ ಮಾಡುತ್ತಿದ್ದಾರೆ. ತಾವು ಏನಾದರೂ ಸ್ಕೀಂ ಹಾಕಿಕೊಂಡಿದ್ದೀರೋ ಈಗಾಗಲೇ ಒಂದು ಇರಾಡಿಕೇಷನ್ ಸ್ಕೀಂ ಮಾಡಿದ್ದು, ಅದು ಪ್ರಧಾನ ಮಂತ್ರಿಯವರಿಂದ ಅಪ್ರೂವ್ ಆಗಿ ನಮ್ಮ ಸರ್ಕಾರಕ್ಕೆ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಾಗಿದೆ. ಇದನ್ನು ಕೊಟ್ಟಗ ತಾವು ಮಾಡುತ್ತೇವೆ ಎಂದು ಕೊಟ್ಟಿದ್ದಾರೆ, ಅದು ಕೂಡ ತಮ್ಮ ಗಮನಕ್ಕೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇವೆ. ಅದರ ಬಗ್ಗೆ ಏನು ಕ್ರಮ ಹಾಕಿಕೊಂಡಿದ್ದೀರಿ ?

ಶ್ರೀ ಆರ್. ರೋಷನಬೇಗ : ಮಾನ್ಯ ಅಧ್ಯಕ್ಷರೇ, ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಬರುವುದಕ್ಕೆ ಮುಂಚೆ ನಾನು ಅದೇ ಮಾತನ್ನು ಹೇಳುತ್ತಿದ್ದೆ. ಬೆಂಗಳೂರಿನಲ್ಲಿರುವ ಅಲಸೂರು, ಯಳಂದೂರು, ಕೆಂಪಾಂಬುದಿ ಕೆರೆಗಳಲ್ಲಿ ಚರಂಡಿ ನೀರು ಹೋಗಿ ಸೊಳ್ಳೆಗಳ ಬ್ರೀಡಿಂಗ್ ಸೆಂಟರ್ ಆಗಿದೆ ಎಂದು ಹೇಳುತ್ತಿದ್ದಾರೆ. ತಾವು ಡಿ.ಡಿ.ಟಿ. ಬಗ್ಗೆ ಹೇಳಿದಿರಿ, ಡಿ.ಡಿ.ಟಿಯನ್ನು ನಾವಲ್ಲಾ ಎಕ್ಸಾಮಿನ್ ಮಾಡಿದ್ದೇವೆ. DDT supplied to the City Corporation is adulterated. ಅದು ಎಡಲ್ಟರೇಟ್ ಆಗುತ್ತದೆ. ಆ ಡಿ.ಡಿ.ಟಿಯನ್ನು ಹೊಡೆದರೆ ಸೊಳ್ಳೆ ಎಲ್ಲಿ ಹೋಗುತ್ತದೆ. ಅದುದರಿಂದ ನಾವು ಬೇರೆ ಔಷಧ ಉಪಯೋಗ ಮಾಡುತ್ತೇವೆ. ಹಾಗೂ ಅದರ ಜೊತೆಗೆ ಕೆರೆಗಳಲ್ಲಿ ಚರಂಡಿ ನೀರು ಹೋಗಬಾರದು ಎಂದು ಹೇಳಿ ಮೆಗಾಸಿಟಿ ಪ್ರಾಜೆಕ್ಟನಲ್ಲಿ ಒಂದು ಸ್ಕೀಂ ತೆಗದುಕೊಳ್ಳುತ್ತಿದ್ದೇವೆ. ಏಷಿಯನ್ ಡೆವಲಪಮೆಂಟ್ ಬ್ಯಾಂಕ್ ಅಸಿಸ್ಟನ್ಸಿನಿಂದ ಮೆಗಾಸಿಟಿ ಪ್ರಾಜೆಕ್ಟನಲ್ಲಿ ಯಳಂದೂರು, ಕೆಂಪಾಂಬುದಿ, ಹಬ್ಬಾಳ್, ಹಾಗೂ ಮದಿವಾಳದ ಕೆರೆಗಳಿಗೆ ಹೋಗಬಾರದು ಎಂದು ಒಂದು ಸ್ಕೀಂ ತೆಗದುಕೊಳ್ಳುತ್ತಿದ್ದೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಬೇರೆ ಲೈನ್ ಮಾಡುತ್ತೀರೋ ಹೇಗೆ ?

ಶ್ರೀ ಎಸ್. ರಾಜಣ್ಣ : ನೀವು ಸೊಳ್ಳೆಗಳನ್ನು ಇರಾಡಿಕೇಟ್ ಮಾಡುತ್ತೀರೋ ? ಆಥವಾ ಲಾಡವಾ ಇರಾಡಿಕೇಟ್ ಮಾಡುತ್ತೀರೋ, ಡಿ.ಡಿ.ಟಿ, ಹಾಕಿದರೆ ಸೊಳ್ಳೆ ಇರಾಡಿಕೇಟ್ ಆಗುತ್ತದೆಯೇ, ಲಾರ್ವಾ ಇರಾಡಿಕೇಟ್ ಆಗುತ್ತದೆಯೇ ?

ಶ್ರೀಮತಿ ಪ್ರಮೀಳಾ ನೇಸರ್ಗಿ : ಚರಂಡಿ ನೀರನ್ನು ಕೆರೆಗೆ ಬಿಡುತ್ತಿದ್ದಾರೆ, ಅಲ್ಲಿಗೆ ಬಿಡುವುದನ್ನು ತಪ್ಪಿಸಿ ಅಲ್ಲಿ ಪೈಪಲೈನ್ ಬೇರೆ ಮಾಡಿ, ಬೇರೆ ಕಡೆ ಕನೆಕ್ಟ ಮಾಡಬೇಕಾಗುತ್ತದೆ. ನಿಮ್ಮ ಮೆಗಾಸಿಟಿ ಪ್ಲಾನ್ ಬರುವವರೆಗೆ ಎಷ್ಟು ಜನ ಮಲೇರಿಯಾ ಬಂದು ಸಾಯುತ್ತಾರೋ.

ಶ್ರೀ ಆರ್. ರೋಷನಬೇಗ್ : ನಾವು ಈಗಾಗಲೇ ಒಂದು ವರ್ಷದಿಂದ ಕ್ರಮ ತೆಗದುಕೊಂಡಿದ್ದೇವೆ. We are at it, we are working on it. Under Mega City Project..

ಶ್ರೀಮತಿ ಪ್ರಮೀಳಾ ನೇಸರ್ಗಿ : ಕಂಪ್ಲೀಟ್ ಆಗುವುದಕ್ಕೆ ಎಷ್ಟು ವರ್ಷ ಬೇಕಾಗುತ್ತದೆ ಎಂದು ಮಾನ್ಯ ಮಂತ್ರಿಗಳು ಹೇಳಬೇಕು.

SRI R. ROSHAN BAIG : This problem cannot be solved overnight or in a day. I agree with the Hon. Member. ಬಹಳ ಹಿಂದೆ ನಾವು ಬೆಂಗಳೂರಿನಿಂದ ಹಣ್ಣು, ಹೂವು ಎಕ್ಸಪೋರ್ಟ್ ಮಾಡುತ್ತಿದ್ದೆವು. ಆಗ ವಿಮಾನ ನಿಲ್ದಾಣದಲ್ಲಿ ಫ್ಲೈಸ್ ಬಂದು ನಿಂತಿದ್ದರೆ ಸೊಳ್ಳೆಗಳೆಲ್ಲಾ ಫ್ಲೈಸ್ ಒಳಗಡೆ ಹೋಗುತ್ತಿದ್ದವು. ಇದನ್ನು ಪೂರ್ಣ ಇಡಾದಿಕೇಟ್ ಮಾಡುವುದಕ್ಕಾಗುವುದಿಲ್ಲ. ಸರ್ಕಾರ ಇದರ ಬಗ್ಗೆ ಸೀರಿಯಸ್ ಆಗಿ ಅಟೆಂಡ್ ಮಾಡುತ್ತದೆಂದು ಭರವಸೆ ಕೊಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಕೇಳುತ್ತಿರುವುದು ಟೆಂಪೊರರಿ ಮೆಜರ್ಸ್, ನೀವು ಮೆಗಾಸಿಟಿ ಪ್ಲಾನಿನಲ್ಲಿ ಪರ್ಮನೆಂಟ್ ಮೆಜರ್ಸ ಏನು ಬೇಕೋ ಅದನ್ನು ಮಾಡಿ. ಅದಕ್ಕೆ ನೀವು ಎಷ್ಟು ಸಮಯ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ. ಆದರೆ ಟೆಂಪರರಿ ಮೆಜರ್ಸ ಮಾಡಿ, ಚರಂಡಿ ನೀರನ್ನು ಕೆರೆಗಳಿಗೆ ಹೋಗುತ್ತಿರುವುದನ್ನು ಹೇಗೆ ತಪ್ಪಿಸುತ್ತೀರಾ? ಅದಕ್ಕೆ ಏನಾದರೂ ಬ್ಲಾಕ್ ಮಾಡಿ ಬೈ ಪಾಸ್ ಮಾಡುತ್ತೀರೋ, ಅಥವಾ ಅದೇ ತರಹ ಪ್ಲಲೈನ್ ಹಾಕಿ ಬೇರೆ ಕಡೆ ಹೋಗುವುದಕ್ಕೆ ತಾವೇನಾದರೂ ವ್ಯವಸ್ಥೆ ಮಾಡುತ್ತೀರೋ?

ಶ್ರೀ ಜೆ.ಹೆಚ್. ಪಟೀಲ್ : ಮಾನ್ಯ ಅಧ್ಯಕ್ಷರೇ, ಸೊಳ್ಳೆ ಪರದೆ ಪಟ್ಟಿಕೊಂಡರೆ ಪ್ರಾಬ್ಲಂ ಸಾಲ್ವ ಆಗುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನೀವು ಇಷ್ಟು ಹಗುರವಾಗಿ ಮಾತನಾಡಿದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮಗೆ ಒಂದುಕಡೆ ಹೆಣ್ಣುಮಕ್ಕಳ ಕಾಟ, ಒಂದು ಕಡೆ ಸರ್ಕಾರದ ಕಾಟ, ಮನೆಯಲ್ಲಿ ಇನ್ನೊಂದುಕಡೆ ಸೊಳ್ಳೆ ಕಾಟ, ಏನು ಮಾಡುವುದು?

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ಈ ತರಹದ ಮಾತನ್ನು ನಾನು ಒಪ್ಪುವುದಿಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ನಾನು ಖಂಡಿತವಾಗಿ ಒಪ್ಪುವುದಿಲ್ಲ. ಇಲ್ಲದಿದ್ದರೆ ಮದುರೆ ಎನ್ನುವಂತಹ ಸಂಪ್ರದಾಯವನ್ನು ತೆಗೆದುಹಾಕಿಬಿಡಿ. ಹೆಣ್ಣುಮಕ್ಕಳ ಕಾಟ ಎನ್ನುವುದಾದರೆ ನಿಮಗೆ ತಾಯಿ ಬೇಡ, ತಂಗಿ ಬೇಡ, ಹೆಂಡತಿ ಬೇಡ ಎಂದು ಹೇಳಿ. ಮಾನ್ಯ ಖರ್ಗೆಯವರು ಅವರ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಮಾತನಾಡಿದ್ದರಲ್ಲಿ ಆನ್ ಪಾರ್ಲಿಮೆಂಟರಿ ಪದ ಯಾವುದೂ ಇಲ್ಲ.

ಶ್ರೀ ಜೆ.ಹೆಚ್. ಪಟೀಲ್ : "ನಿಮಗೆ ಹೆಣ್ಣುಮಕ್ಕಳ ಕಾಟ" ಈ ಮನೆಯಲ್ಲೋ ಅಥವಾ ನಿಮ್ಮ ಮನೆಯಲ್ಲೋ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ಇದು ಇನ್ನು ಜಾಸ್ತಿಯಾಯಿತು. ಯಾರಾದರೂ ಏನಾದರೂ ಅಂದುಕೊಳ್ಳಿ ಖಂಡಿತವಾಗಿ ನಾನು ಈ ಮಾತನ್ನು ಒಪ್ಪುವುದಿಲ್ಲ. ನಾನು ಇದಕ್ಕೆ ಪ್ರತಿಭಟನೆ ಮಾಡಬೇಕಾಗುತ್ತದೆ. ಅವರು ತಮ್ಮ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

(ಈ ಹಂತದಲ್ಲಿ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಧರಣಿ ಮಾಡಲು ಭಾವಿಗೆ ತೆರಳಿದರು)

ಶ್ರೀಮತಿ ಎನ್. ಜ್ಯೋತಿರಡ್ಡಿ : ಮಾನ್ಯ ಅಧ್ಯಕ್ಷರೇ ಹೆಣ್ಣುಮಕ್ಕಳ ಕಾಟ ಎಂದು ಹೇಳಿರುವ ಪದಕ್ಕೆ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ.

(ಈ ಹಂತದಲ್ಲಿ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀಮತಿ ಪ್ರಮೀಳಾ ನೇಸರ್ಗಿ : ಸನ್ಮಾನ್ಯ ಅಧ್ಯಕ್ಷರೆ, ಅವರ ಧರ್ಮಪತ್ನಿಯವರು ನನಗೆ ಗೊತ್ತು, ಅವರು ಕಾಟ ಕೊಡತಕ್ಕಂಥ ಧರ್ಮಪತ್ನಿ ಅಲ್ಲ. ನೀವು ಹೇಳತಕ್ಕಂಥದ್ದು ಎಲ್ಲರಿಗೂ ಅವಮಾನವಾಗುತ್ತದೆ, ಇಡೀ ಸದನದ ಹೆಣ್ಣುಮಕ್ಕಳಿಗೆ, ಮತ್ತು ಇಡೀ ಹೆಣ್ಣುಮಕ್ಕಳಿಗೆ ಅವಮಾನ್ ಮಾಡಿದಂತಾಗುತ್ತದೆ.

ಅಧ್ಯಕ್ಷರು : ನೀವು ನಿಮ್ಮ ಸ್ಥಾನಕ್ಕೆ ಬಂದರೆ, ನಾನೊಂದು ಮಾತನ್ನು ಹೇಳುತ್ತೇನೆ. ಇವರೆಲ್ಲ ಒಂದು ಕಡೆ ಆದರೆ ನಾನು ನಿಮ್ಮ ಪರ ಇದ್ದೇನೆ. ನಾನು ನಿಮ್ಮನ್ನು ಬಿಟ್ಟುಕೊಡುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಶಾಸಕಿಯಾದ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ತಮ್ಮ ಆಸನಕ್ಕೆ ಮರಳಿದರು)

ಶ್ರೀ ಜೆ.ಹೆಚ್. ಪಟೇಲ್ : ತತ್ವಜ್ಞಾನಿ ಸಾಕ್ರೇಟೀಸನು ಸಹ ಮನೆ ಹೆಂಡತಿಯ ಕಾಟವನ್ನು ತಪ್ಪಿಸಿಕೊಳ್ಳುವುದಕ್ಕೆ ಊರೂರು ತಿರುಗುತ್ತಿದ್ದನಂತೆ, ಅದಕ್ಕೆ ನಾನು ಬಿರ್ಗಯವರಿಗೆ ತಮಾಷೆ ಮಾಡಿದೆ ಅಷ್ಟೆ. ದಯವಿಟ್ಟು ತಾವು ಕೋಪ ಮಾಡಿಕೊಳ್ಳಬಾರದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ತಾವು ಈ ರೀತಿಯಾಗಿ ಹೇಳಿದರೆ ನಾವೂ ಹಿಂದಿನ ಕತೆ ಪುರಾಣವನ್ನೆಲ್ಲ ಹೇಳಬೇಕಾಗುತ್ತದೆ. ನಿಮ್ಮ ಪರ್ಸನಲಿದನ್ನು ಕೊಡಿ ಎಂದು ಹೇಳಬೇಕಾಗುತ್ತದೆ ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಡಿ.

ಅಧ್ಯಕ್ಷರು : ಪ್ರಮೀಳಾರವರೆ, ನೋಡಿ ಅಧಿಕೃತವಾಗಿ ನಾನು ಹೇಳುತ್ತೇನೆ, ಇವರೇನು ಸುಮ್ಮನೆ ಸಾಂಗೀಕವಾಗಿ ಹೆಣ್ಣುಮಕ್ಕಳ ಕಾಟ ಎಂದು ಹೇಳಿಬಿಟ್ಟರು ಇವರಿಂದ ಎಷ್ಟು ಜನರಿಗೆ ಕಾಟ ಇದೆಯೆಂದು ನನ್ನ ಹತ್ತಿರ ವರದಿ ಇದೆ. ನೀವು ಏಕೆ ಯೋಚನೆ ಮಾಡುತ್ತೀರಿ? ನಾನು ನಿಮ್ಮ ಪರ ಇದ್ದೇನೆ. ಈಗ ಇಂತಹ ಗಂಡಂದಿರಿದ್ದರೂ ಕಾಟವೆ, ಇವರು ಹೇಳುವಂತಹವರಿದ್ದರು ಅದು ಅವರಿಂದಲೂ ಕಾಟವೆ, ಕಾಟ ಕಾಟವೆ; ಇವೆಲ್ಲಕ್ಕಿಂತ ಸೊಳ್ಳೆ ಕಾಟ ಜಾಸ್ತಿಯಾಗಿದೆ. ವಾಟಾಳ್ ನಾಗರಾಜ್ ರವರು ಸರಿಯಾದ ಸಮಯಕ್ಕೆ ಬಂದರು.

ಶ್ರೀ ವಾಟಾಳ್ ನಾಗರಾಜ್ : ಯಾರ ಮನೆಯಲ್ಲಿ ಹೆಂಡತಿಯರ ಕಾಟ ಎಂದು ಹೇಳುತ್ತಿದ್ದೀರಿ ಅದು ಸ್ವಲ್ಪ ಸರಿಯಾಗಿ ಕೇಳಿಸಲಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮೊದಲು ಬಿರ್ಗಯವರು ಹೇಳಿದರು, ಆಮೇಲೆ ಉಪಮುಖ್ಯಮಂತ್ರಿಗಳು ಹೇಳಿದರು, ಈಗ ನಮ್ಮ ಅಧ್ಯಕ್ಷರು ನನ್ನ ಪರ ಬಂದಿದ್ದಾರೆ, ತಾವು ಬರುತ್ತೀರೋ, ಅಥವಾ ಅವರ ಜೊತೆ ಸೇರುತ್ತೀರೋ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಸಂಪೂರ್ಣ ನೂರಕ್ಕೆ ನೂರು ಭಾಗ ಹೆಣ್ಣುಮಕ್ಕಳ ಪರ ಇದ್ದೇನೆ. ನೀವೇನೂ ಹೆದರಬೇಡಿ. ನಾವೆಲ್ಲರೂ ಎಸ್ಪಿ, ಜೆ.ಹೆಚ್. ಪಟೇಲರೂ ಹೆಣ್ಣು ಮಕ್ಕಳ ಪರ ಇದ್ದಾರೆ ಬೇಕಾದರೆ ಅವರು ಆತ್ಮ ಮುಟ್ಟಿ ನೋಡಿ ಇಲ್ಲ ಎಂದು ಹೇಳಲಿ ನೋಡೋಣ.

ಅಧ್ಯಕ್ಷರು : ಅವರ ಆತ್ಮ ಮುಟ್ಟಿನೋಡುವುದಕ್ಕೆ ಆತ್ಮ ಇಲ್ಲಿ ಇರುವುದಿಲ್ಲ, ಅದು ಅಲ್ಲೇ ಇರುತ್ತದೆ, ಅವರೇನು ಅಷ್ಟು ದಡ್ಡರಲ್ಲ ಆತ್ಮವನ್ನು ಎಲ್ಲೆಂದರಲ್ಲಿ ಇಟ್ಟುಕೊಳ್ಳುವುದಕ್ಕೆ.

ಶ್ರೀ ವಾಟಾಳ್ ನಾಗರಾಜ್ : ಅವರು ಹೆಣ್ಣುಕ್ಕಳ ಬಗ್ಗೆ ಅಪಾರವಾದ ಅಭಿಮಾನವನ್ನು ಇಟ್ಟುಕೊಂಡಿದ್ದಾರೆ ಎಂದು ನಾನು ಹೇಳಿದನೆ ಹೊರತು ಉಪ ಮುಖ್ಯಮಂತ್ರಿಗಳು ತಾವು ಈ ನನ್ನ ಮಾತನ್ನು ಸಮರ್ಥನೆ ಮಾಡುತ್ತೀರ ತಾನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ನಾನು ಪದೇ ಪದೇ ಹೇಳುತ್ತಿದ್ದೇನೆ, ಯಾವುದೇ ವಿಷಯ ಯಾವುದಕ್ಕಾದರೂ ಬಂದರೆ ಅದನ್ನು ಹೆಣ್ಣುಮಕ್ಕಳಿಗೆ ತಂದುಬಿಟ್ಟು ಅದನ್ನು ದೊಡ್ಡದಾಗಿ ಸಭೆಯಲ್ಲಿ ಮಾಡಬೇಡಿ ಎಂದು ತಮಗೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅದೇ ನಾನು ಅವರಿಗೆ ರಾಜ್ಯಸಭೆಗೆ ಹೋಗಬೇಡಿ, ಹೆಣ್ಣುಮಕ್ಕಳ ಪರ ನೀವು ಇರಬೇಕು ಎಂದು ಹೇಳುತ್ತಿದ್ದೇನೆ. ಈಗಲೂ ಒಂದು ಒಳ್ಳೆಯ ಅವಕಾಶ ಇದೆ ತಾವು ರಾಜ್ಯಸಭೆಗೆ ರಾಜೀನಾಮೆಯನ್ನು ಕೊಟ್ಟು ತಾವು ಇಲ್ಲಿಯೇ ಇರಿ.

MR. SPEAKER : I am confused whether it is any humour or the valour is the best part of discussion.

ಶ್ರೀ ಎಸ್. ಯೋಗೀಶ್ ಭಟ್ : ಸನ್ಮಾನ್ಯ ಅಧ್ಯಕ್ಷರೆ, ಒಂದು ಗಂಭೀರವಾದ ಪ್ರಶ್ನೆ ಎಂದು ಹೇಳಿದರೆ, ಈ ಸೊಳ್ಳೆ ಕಾಟಕ್ಕೂ, ಮಲೇರಿಯಾಕ್ಕೂ ಹತ್ತಿರದ ಸಂಬಂಧ ಇದೆ. ಮತ್ತೆ ವಿಶೇಷವಾದ ಮಲೇರಿಯಾ ರೋಗದ ಬರುವಂಥದ್ದೆ ಹೆಣ್ಣು ಸೊಳ್ಳೆಗಳಿಂದ ಎಂದು ಕೇಳಿದ್ದೇನೆ. ಇದರ ಬಗ್ಗೆ ನಾನು ಮಹಿಳಾ ವಿರೋಧಿಯಾಗಿ ಹೇಳುತ್ತಿಲ್ಲ, ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣವನ್ನು ಕೊಡಬೇಕೆಂದು ಕೇಳುತ್ತಿದ್ದೇನೆ.

(ನಗು)

ಶ್ರೀವಾಟಾಳ್ ನಾಗರಾಜ್ : ಅಧ್ಯಕ್ಷರೆ, ಹೆಣ್ಣು ಸೊಳ್ಳೆಗಳಿಗೆ ಸಂತಾನಹರಣ ಮಾಡಿಸಬೇಕು

(ನಗು)

ಅಧ್ಯಕ್ಷರು : ನೀವೆಲ್ಲ ಎಷ್ಟು strongly against the women ಗೊತ್ತಾಗುತ್ತದೆ, a day will come when all of you would surrender to women.

ಶ್ರೀ ಎಂ. ಪಿ. ಪ್ರಕಾಶ್ : ಹೆಣ್ಣುಮಕ್ಕಳ ಹೇಗ ಎಂದರೆ ತನಗೆ ಬೇಕಾದಂಥ ಎಲ್ಲ ಅಭೀಷ್ಟೆಗಳನ್ನು ನೇರವಾಗಿ ಹೇಳುವುದಿಲ್ಲ. ಗಂಡಂದಿರನ್ನು ಆ ಅಭೀಷ್ಟೆಗೆ ಬರುವ ರೀತಿಯಲ್ಲಿ ಮಾಡುತ್ತಾರೆ. ಅದಕ್ಕೆ

ಕಾಂತ ಸಂಹಿತೆ ಎಂದು ಕರೆಯುವುದು. ಆದ್ದರಿಂದ ಹೆಣ್ಣುಮಕ್ಕಳು ಯಾವಾಗಲೂ ಪ್ರಬಲರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಧ್ಯಕ್ಷರೆ, ನಾನು ಹೇಳುತ್ತೇನೆ, ಹೆಣ್ಣನ್ನು ಹೇಗೆ ಮೋಸ ಮಾಡುತ್ತಾರೆ ಎಂದರೆ, ನೀನು ಇಂದ್ರಚಂದ್ರ ಎಂದು ಹೇಳಿ ಹೊಗಳಿ, ರಾತ್ರಿ ಹೊತ್ತಾಗಿ ಬಂದರೂ ಕೂಡ ಕಾರಣಗಳನ್ನು ಹೇಳಿ ಮರುಳು ಮಾಡುವುದು ತಮಗೆ ಗೊತ್ತಿದೆ. ನೀವು ಹೆಣ್ಣನ್ನು ಹೇಗೆ ಮೋಸ ಮಾಡುತ್ತೀರಿ ಎಂಬುದು ಪ್ರಪಂಚದಲ್ಲಿ ಎಲ್ಲರಿಗೂ ಗೊತ್ತಿದೆ. ಅದರ ಬಗ್ಗೆ ನಾನು ಹೇಳುವುದಿಲ್ಲ. "ಹೆಣ್ಣು ಹೆಣ್ಣೆಂದು ಜರಿಯುವವರು ಕಣ್ಣು ಕಾಣದ ಗಾಂಪರರು" ಎಂದು ಅದಿಬಿದಿಯ ಧರ್ಮದಲ್ಲಿ ಸಂಜಿ ಹೊನ್ನಮ್ಮ ಹೇಳಿದ್ದು ಗೊತ್ತಿದೆ. ಆದ್ದರಿಂದ ತಾವೆಲ್ಲರೂ ಕೂಡ ಕಣ್ಣುಕಾಣದ ಗಾಂಪರಾಗಿದ್ದೀರೇನೋ ಏಂಬ ಸಣಕೆ.

ಅಧ್ಯಕ್ಷರು : ಪ್ರಮೀಳಾರವರೆ, ಆತುರಾತುರವಾಗಿ ದೋಣಿ ನಡೆಸಿದ ನಾವಿಕನ ಕಥೆ ಕೂಡ ಇದೆ. ಪದ ಮುಟ್ಟಿದಮೇಲೆ.

ಕುಂದಾಪುರಕ್ಕೊಂದು ಟ್ರಾಫಿಕ್ ಪೋಲೀಸ್ ಠಾಣೆ.

148 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗೃಹ ಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರದಲ್ಲಿ ರಸ್ತೆ ಅಪಘಾತ ಹಾಗೂ ವಾಹನಗಳ ಜಿಮುವಿಲ್ಲವಿಕಿವುದರಿಂದ ಟ್ರಾಫಿಕ್ ಪೋಲೀಸ್ ಸ್ಟೇಷನ್ ತೆರೆಯುವ ಯೋಜನೆ ಸರ್ಕಾರದ ಮುಂದಿದೆಯೇ;

ಆ) ಈ ವಾಹನ ಅಪಘಾತಗಳನ್ನು ಮತ್ತು ವಾಹನಗಳನ್ನು ತಡೆಯಲು ಸರಕಾರ ತೆಗೆದುಕೊಳ್ಳುವ ಕ್ರಮವೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಮಂತ್ರಿಗಳು) :

ಅ) ಇಲ್ಲ.

ಆ) ವಾಹನ ಅಪಘಾತಗಳನ್ನು ತಡೆಯಲು ಪ್ರತಿದಿನ ವಾಹನ ತಪಾಸಣೆ ನಡೆಸುವುದಲ್ಲದೆ, ಅತಿವೇಗವಲ್ಲಿ ಬಿಡುವ ವಾಹನಗಳನ್ನು ರಾಡಾರ ಗನ್ ಮೂಲಕ ಪತ್ತೆ ಹಚ್ಚಿ ಕೇಸುಗಳನ್ನು ದಾಖಲಿಸಿಕೊಳ್ಳಲಾಗುತ್ತಿದೆ. ಇದರ ಜೊತೆಗೆ ರಸ್ತೆ ಉಬ್ಬುಗಳನ್ನು ರಚಿಸಿ ವೇಗವನ್ನು ಕುಂಠಿತಗೊಳಿಸುವ ಎಲ್ಲಾ ಕ್ರಮಗಳನ್ನು ಸಹ ತಗಮಕೊಳ್ಳಲಾಗಿದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಟ್ರಾಫಿಕ್ ಪೋಲೀಸ್ ಸ್ಟೇಷನ್ ಮಾಡುತ್ತೀರಾ ಎಂದು ಕೇಳಿರತಕ್ಕನನ್ನ ಪ್ರಶ್ನೆಗೆ, ರಾಡಾರಗನ್ ಮೂಲಕ ವಾಹನಗಳ ವೇಗವನ್ನು ಪತ್ತೆ ಹಚ್ಚಲಾಗುವುದು, ಅದರ ಜೊತೆಗೆ ರಸ್ತೆಗಳಲ್ಲಿ ಉಬ್ಬುಗಳನ್ನು ರಚಿಸಲಾಗುವುದು ಎನ್ನತಕ್ಕಂಥ ಉತ್ತರವನ್ನು ಕೊಟ್ಟಿದ್ದೀರಿ.